ದಿನಾಂಕಃ 04-03-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿ ಸವಾಲುಃ-</u> 3 ನೇ ಎದುರುದಾರ ಪರ ಶ್ರೀ ಎನ್ ಡಿ ವಕೀಲರಿಂದ

ನಾನು ಮೃತ ಶಿವಾನಂದನ ಹೆಂಡತಿ ಎಂದು ತೋರಿಸಲು ನನ್ನ ಆಧಾರ ಕಾರ್ಡ ಹಾಜರುಪಡಿಸಿರುತ್ತೇನೆ. ನಾನು ಮತ್ತು ಇತರೆ ಅರ್ಜಿದಾರರು ಮೃತ ಶಿವಾನಂದನ ವಾರಸುದಾರರು ಎಂದು ತೋರಿಸಲು ದಾಖಲು ಹಾಜರುಪಡಿಸಿರುತ್ತೇನೆ. ನಾನು ಮೂಲತಃ ಶಿರಹಟ್ಟಿ ತಾಲೂಕಿನ ನಾಗರಮಡವು ಗ್ರಾಮದವಳು ಎಂದರೆ ಸರಿ. ಶಿವಾನಂದ ಅಂಗವಿಕಲರಾಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ವಿಚಾರಣೆ ಪ್ರಮಾಣ ಪತ್ರ ಬರೆಯಲು ಮಾಹಿತಿ ನಾನೇ ಕೊಟ್ಟಿರುತ್ತೇನೆ. ಪೋಲಿಸರು ಸಲ್ಲಿಸಿರುವ ಅಂತಿಮ ವರದಿಯ ಬಗ್ಗೆ ನನಗೆ ಮಾಹಿತಿ ಇದೆ. ನಾನು 3 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಗಂಡ ವ್ಯವಸಾಯ ಮಾಡುತ್ತಿದ್ದನು. ನನ್ನ ಗಂಡನ ಹೆಸರಿನಲ್ಲಿ ಜಮೀನು ಇದ್ದು ನಾನು ಆ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ.

ನನ್ನ ಗಂಡ ವ್ಯವಸಾಯ ಮಾಡುತ್ತಿದ್ದು ಅವರ ಪ್ರತಿ ತಿಂಗಳ ಆದಾಯ ರೂ.20000/- ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ಟ್ರಾಕ್ಟರ ಮತ್ತು ಟ್ರೇಲರನ ಮಾಲೀಕರ ಹೆಸರು ನನಗೆ ಗೊತ್ತಿಲ್ಲ. ಟ್ರಾಕ್ಟರ ಟ್ರೇಲರ ಚಲಿಸುತ್ತೀರುವಾಗಿ ನನ್ನ ಗಂಡ ಟ್ರೇಲರನ ಉದಗಿಯ ಮೇಲೆ ನಿಂತಿದ್ದರಿಂದ ಕೆಳಗೆ ಬಿದ್ದು ಗಾಯಗೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ನನ್ನ ಗಂಡ ಟ್ರೇಲರನಲ್ಲಿ ಪ್ರಯಾಣಿಸುತ್ತಿರುವಾಗ ಟ್ರಾಕ್ಟರ ಚಾಲಕ ಕೆಡವಿದ್ದರಿಂದ ಅವರು ಗಾಯಗೊಂಡಿದ್ದರು ಎಂದು ನುಡಿದಿದ್ದಾರೆ. ನನ್ನ ಗಂಡ ಉದಿಗೆಯ ಮೇಲೆ ನಿಂತು ಕೆಳಗೆ ಬಿದಿದ್ದರು ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ಟ್ರಾಕ್ಟರ ಚಾಲಕನಿಗೆ ಸೂಕ್ತ ಪರವಾನಿಗೆ ಇಲ್ಲದಿರುವ ಕಾರಣ ಮೂರನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರು ಅಲ್ಲ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ಟ್ರೇಲರಗೆ ಸೂಕ್ತ ವಿಮೆ ಇರಲಿಲ್ಲ ಎಂದರೆ ಸರಿಯಲ್ಲ.

ಪಾಟಿ ಸವಾಲುಃ 1 ನೇ ಎದುರುದಾರರ ಪರ ಶ್ರೀ ಎಸ ಆರ್ ಹೆಚ್ ವಕೀಲರಿಂದ

ಕೂಗಿಸಲಾಗಿ ಗೈರಹಾಜರು ಇರುವುದರಿಂದ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ಸದರಿ ಸಾಕ್ಷಿದಾರರ ಸಾಕ್ಷ್ಯವನ್ನು ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ)